# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2009-10ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.

ಓದಲಾಗಿದೆ:- ಪತ್ರ ಸಂ: ಕವಶಿಸಸ/ಸಿಆರ್(ಶಿ)-119/2008-09, ದಿನಾಂಕ:25-03-09.

*****

ಪ್ರಸ್ತಾವನೆ:-

2009-10 ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಘೋಷಿಸಿರುವುದರ ಮೇರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಉತ್ತೇಜನಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಒಟ್ಟು 114 ವಸತಿ ಶಾಲೆಗಳನ್ನು "ಕಿತ್ತೂರು ರಾಣಿ ಚೆನ್ನಮ್ಮ" ಹೆಸರಿನಲ್ಲಿ ತೆರೆಯಲು ಹಾಗೂ ಈ ವಸತಿ ಶಾಲೆಗಳಲ್ಲಿ ಶೇ.25 ರಷ್ಟು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರಿಗೂ ಸಹ ಅವಕಾಶ ಕಲ್ಪಿಸಿಕೊಡಲು ಅನುವಾಗುವಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸಕಇ 53 ಎಂಡಿಎಸ್ 2009, ಬೆಂಗಳೂರು ದಿನಾಂಕ:19-05-2009

2009-10ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳಿಗೆ "ಕಿತ್ತೂರು ರಾಣಿ ಚೆನ್ನಮ್ಮ" ಹೆಸರಿನಲ್ಲಿ 114 ವಸತಿ ಶಾಲೆಗಳನ್ನು (6ನೇ ತರಗತಿಯಿಂದ 12ನೇ ತರಗತಿಯವರೆಗೆ) ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ಸ್ಥಳಗಳಲ್ಲಿ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಷರತ್ತುಗಳು:-

1) ಪ್ರತಿ ವಸತಿ ಶಾಲೆ ಪ್ರಾರಂಭದಲ್ಲಿ 50 ಸಂಖ್ಯಾಬಲ ಮಾತ್ರ ಹೊಂದಿರತಕ್ಕದ್ದು.
2) ಪರಿಶಿಷ್ಟ ಜಾತಿಯ ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಕ್ರಮವಾಗಿ ಶೇಕಡ 60, ಶೇಕಡ 15 ಹಾಗೂ ಶೇಕಡ 25 ರಷ್ಟು ಸೀಟುಗಳನ್ನು ಕಾಯ್ದಿರಿಸತಕ್ಕದ್ದು, ಅದೇ ರೀತಿ ಪರಿಶಿಷ್ಟ ಪಂಗಡದ ವಸತಿ ಶಾಲೆಗಳಲ್ಲಿ ಅಂತಹ ಸೀಟುಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಕ್ರಮವಾಗಿ ಶೇ.15, ಶೇ.60 ಹಾಗೂ ಶೇ.25 ರ ಪ್ರಮಾಣದಲ್ಲಿ ಕಾಯ್ದಿರಿಸತಕ್ಕದ್ದು.
3) ಈ 114 ವಸತಿ ಶಾಲೆಗಳ ಹೆಸರುಗಳನ್ನು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಎಂಬ ಶಿರೋನಾಮದಲ್ಲಿ 82 ವಸತಿ ಶಾಲೆಗಳನ್ನು ಪರಿಶಿಷ್ಟ ಜಾತಿಗೆ ಮತ್ತು 32 ಶಾಲೆಗಳನ್ನು ಪರಿಶಿಷ್ಟ ವರ್ಗದವರಿಗಾಗಿ ಪ್ರಾರಂಭಿಸತಕ್ಕದ್ದು.
4) ಈ ವಸತಿ ಶಾಲೆಗಳನ್ನು ಆಯಾ ಪ್ರದೇಶದಲ್ಲಿ ಈಗಾಗಲೇ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಿದ ಸ್ಥಳಗಳ ಸಮೀಪದಲ್ಲಿಯೇ ಸಾಧ್ಯವಾದಷ್ಟು ಮಟ್ಟಿಗೆ ಪ್ರಾರಂಭಿಸತಕ್ಕದ್ದು.
5) ಅಂತಹ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ನಿಗಧಿಗೊಳಿಸಿರುವ ವಿಧಿ ವಿಧಾನವನ್ನು ಪಾಲಿಸತಕ್ಕದ್ದು.
6) ಈ ಪ್ರತಿ ವಸತಿ ಶಾಲೆಗೆ ಮಂಜೂರಾದ ಸಂಖ್ಯಾಬಲದ ಕನಿಷ್ಠ ಶೇಕಡಾ 50 ರಷ್ಟು ಸೀಟುಗಳನ್ನು ಆಯಾ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಕಾಯ್ದಿರಿಸತಕ್ಕದ್ದು.
7) ಈ ವಸತಿ ಶಾಲೆಗಳಲ್ಲಿ ಬೋಧನಾ ಮಾಧ್ಯಮವನ್ನು ಭಾರತ ಸರ್ಕಾರದ ನವೋದಯ ವಸತಿ ಶಾಲೆಗಳಲ್ಲಿ ನಿಗಧಿಪಡಿಸಿರುವಂತೆ ಅನುಸರಿಸತಕ್ಕದ್ದು.

19/5/09

8) 2009-10ನೇ ಸಾಲಿನಲ್ಲಿ 114 ವಸತಿ ಶಾಲೆಗಳಿಗೆ ಈ ಕೆಳಕಂಡಂತೆ ಬೋಧಕ ಬೋಧಕೇತರ ಹುದ್ದೆಗಳನ್ನು ಸೃಜಿಸಲಾಗಿದ್ದು ಈ ಹುದ್ದೆಗಳ ವೇತನ ಶ್ರೇಣಿ ರಾಜ್ಯ ಸರ್ಕಾರದ ವೇತನ ಶ್ರೇಣಿಗಳ ಅನ್ವಯ ಇರುತ್ತವೆ.

| ಕ್ರ ಸಂ | ಬೋಧಕ ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ | ಬೋಧಕೇತರ ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಪ್ರಾಂಶುಪಾಲರು | 114 | ಸ್ಟಾಫ್ ನರ್ಸ್ | 114 |
| 2 | ಕನ್ನಡ ಶಿಕ್ಷಕರು | 114 | ನಿಲಯ ಪಾಲಕರು | 114 |
| 3 | ಹಿಂದಿ ಶಿಕ್ಷಕರು | 114 | ಅಡುಗೆಯವರು | 114 |
| 4 | ಆಂಗ್ಲ ಶಿಕ್ಷಕರು | 114 | ಅಡುಗೆ ಸಹಾಯಕರು | 114 |
| 5 | ಗಣಿತ ಶಿಕ್ಷಕರು | 114 | ಕಾವಲುಗಾರರು | 114 |
| | ಒಟ್ಟು | 570 | ಒಟ್ಟು | 570 |

9) ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಪ್ರಥಮ ಹಂತದಲ್ಲಿ ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳ ರೀತ್ಯ ತುಂಬತಕ್ಕದ್ದು. ಒಂದು ಪಕ್ಷ ಎಲ್ಲಾ ಹುದ್ದೆಗಳನ್ನು ತುಂಬಲು ಸಾಧ್ಯವಾಗದೇ ಇದ್ದಲ್ಲಿ ಶಿಕ್ಷಣ ಇಲಾಖೆಯಿಂದ [illegible] ತಕ್ಕದ್ದು.

10) ಈ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ವೃತ್ತಿಪರ ಶಿಕ್ಷಣ ಮತ್ತು ತರಬೇತಿಗಳಿಗೆ ಪ್ರೋತ್ಸಾಹ' ನೀಡತಕ್ಕದ್ದು.

11) ಈ ವಸತಿ ಶಾಲೆಗಳನ್ನು ಪ್ರಾರಂಭಿಸಲು ತಗಲುವ ರೂ.25.28 ಕೋಟಿ (ಇಪ್ಪತ್ತೈದು ಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು 2009-10ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (SCSP/TSP pooled fund) ಅಡಿ ಲಭ್ಯವಿರುವ ಅನುದಾನದಿಂದಲೇ ಭರಿಸತಕ್ಕದ್ದು. ಇದಕ್ಕಾಗಿ ಪ್ರತ್ಯೇಕವಾಗಿ ಆಯವ್ಯಯ ಒದಗಿಸಿಕೊಳ್ಳಲಾಗಿಲ್ಲ.

12) ಇದೇ ರೀತಿ 2010-11 ಮತ್ತು 2011-12 ನೇ ಸಾಲಿಗೆ ಅಂದರೆ 2ನೇ ವರ್ಷಕ್ಕೆ ಮತ್ತು 3ನೇ ವರ್ಷಕ್ಕೆ ಬೇಕಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸಲು ಸರ್ಕಾರದ ಮಂಜೂರಾತಿಗಾಗಿ ಸೂಕ್ತ ಪ್ರಸ್ತಾವನೆ ಸಲ್ಲಿಸತಕ್ಕದ್ದು.

13) ಈ ವಸತಿ ಶಾಲೆಗಳಿಗೆ ಅಗತ್ಯವಿರುವ ಕಟ್ಟಡಗಳ ಕುರಿತಂತೆ "ಕ್ರಿಯಾ ಯೋಜನೆ" ತಯಾರಿಸಿ 2009-10ನೇ ಸಾಲಿನಿಂದ ಹಂತ ಹಂತವಾಗಿ ಬೇಕಾಗುವ ಆಯವ್ಯಯ ಒದಗಿಸಿಕೊಳ್ಳಲು ಕ್ರಮಕ್ಕೆಗೊಳ್ಳತಕ್ಕದ್ದು.

14) 2010-11ನೇ ಸಾಲಿನ ನಂತರದ ಅವಧಿಯಲ್ಲಿ ಅಂತಹ ಕಟ್ಟಡಗಳ ನಿರ್ಮಾಣಕ್ಕೆ ಬೇಕಾಗುವ ಮೊತ್ತವನ್ನು ಸಂಬಂಧಪಟ್ಟ ವರ್ಷದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಹಾಗೂ ಗಿರಿಜನ ಉಪ ಯೋಜನೆಗೆ ಒದಗಿಸುವ ಅನುದಾನದಲ್ಲಿ ಭರಿಸತಕ್ಕದ್ದು.

ಇದಕ್ಕೆ ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ:ಎಫ್‌ಡಿ 302 ವೆಚ್ಚ-3/09, ದಿನಾಂಕ:12-05-2009 ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

19/5/09

(ಎ.ಎಂ.ಚಿದಾನಂದಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಮಾಜ ಕಲ್ಯಾಣ ಇಲಾಖೆ

ಗೆ:-

1) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
2) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
3) ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು

ರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗ
ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು/ಎಲ್ಲಾ ಜಿಲ್ಲಾ ಪರಿಶಿಷ್ಟ ವರ್ಗಗಳ ಅ
ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು (ಆಯುಕ್ತರು, ಸಮಾಜ ಕಲ್ಯಾಣ
ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಮುಖಾಂತರ).

6) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್ (ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಮುಖಾಂತರ)
7) ಸರ್ಕಾರದ ಅಧಿನ ಕಾರ್ಯದರ್ಶಿ (3 & 9), ಆರ್ಥಿಕ ಇಲಾಖೆ, ವಿಧಾನ ಸೌಧ.
8) ಸರ್ಕಾರದ ಅಧೀನ ಕಾರ್ಯದರ್ಶಿ–2 ಮತ್ತು 3, ಸಮಾಜ ಕಲ್ಯಾಣ ಇಲಾಖೆ.
9) ಹೆಚ್ಚುವರಿ ಪ್ರತಿ
10) ಶಾಖಾ ರಕ್ಷಾ ಕಡತ

<u>ಪ್ರತಿ ಇವರಿಗೆ:–</u>

- ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
- ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
- ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
- ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ

# ಅನುಬಂಧ

ಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣುಮಕ್ಕಳ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗಾಗಿ ಆಯ್ಕೆ ಮಾಡಲಾದ ತಾಲ್ಲೂಕುವಾರು ಸ್ಥಳಗಳ ವಿವರ

| ಕ್ರ. ಸಂ. | ಜಿಲ್ಲೆಗಳು | ಕ್ರ. ಸಂ. | ಪರಿಶಿಷ್ಟ ಜಾತಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಆಯ್ಕೆ ಮಾಡಲಾದ ತಾಲ್ಲೂಕುಗಳು | ಕ್ರ. ಸಂ. | ಪರಿಶಿಷ್ಟ ವರ್ಗದ ವಸತಿ ಶಾಲೆಗಳನ್ನು ಪ್ರಾರಂಭಿಸಲು ಆಯ್ಕೆ ಮಾಡಲಾದ ತಾಲ್ಲೂಕುಗಳು |
|---|---|---|---|---|---|
| 1 | ಬೆಂಗಳೂರು (ನ) | 1 | ಆನೇಕಲ್ | | |
| 2 | ಬೆಂಗಳೂರು (ಗ್ರಾ) | 2 | ಹೊಸಕೋಟೆ | | |
| 3 | ರಾಮನಗರ | 3 | ಕನಕಪುರ | | |
| | | 4 | ಮಾಗಡಿ | | |
| | | 5 | ಚೆನ್ನಪಟ್ಟಣ | | |
| 4 | ಚಿತ್ರದುರ್ಗ | 6 | ಹೊಸದುರ್ಗ | 1 | ಮೊಳಕಾಲ್ಮೂರು |
| | | 7 | ಹಿರಿಯೂರು | 2 | ಚಳ್ಳಕೆರೆ |
| | | 8 | ಹೊಳಲ್ಕೆರೆ | | |
| 5 | ಕೋಲಾರ | 9 | ಮುಳಬಾಗಿಲು | 3 | ಶ್ರೀನಿವಾಸಪುರ |
| | | 10 | ಮಾಲೂರು | | |
| | | 11 | ಬಂಗಾರಪೇಟೆ | | |
| 6 | ಚಿಕ್ಕಬಳ್ಳಾಪುರ | 12 | ಗುಡಿಬಂಡೆ | 4 | ಗೌರಿಬಿದನೂರು |
| | | 13 | ಬಾಗೇಪಲ್ಲಿ | | |
| | | 14 | ಚಿಂತಾಮಣಿ | | |
| | | 15 | ಶಿಡ್ಲಘಟ್ಟ | | |
| 7 | ಶಿವಮೊಗ್ಗ | 16 | ಸೊರಬ | | |
| | | 17 | ಶಿಕಾರಿಪುರ | | |
| 8 | ತುಮಕೂರು | 18 | ತುಮಕೂರು | 5 | ಶಿರಾ |
| | | 19 | ಪಾವಗಡ | 6 | ಮಧುಗಿರಿ |
| | | 20 | ಗುಬ್ಬಿ | | |
| | | 21 | ಚಿಕ್ಕನಾಯಕನಹಳ್ಳಿ | | |
| | | 22 | ಕೊರಟಗೆರೆ | | |
| | | 23 | ತುರುವೆಕೆರೆ | | |
| 9 | ದಾವಣಗೆರೆ | 24 | ಚನ್ನಗಿರಿ | 7 | ಹರಪನಹಳ್ಳಿ |
| | | 25 | ಹೊನ್ನಾಳಿ | 8 | ಜಗಳೂರು |
| 10 | ಮೈಸೂರು | 26 | ಹುಣಸೂರು | 9 | ಹೆಚ್.ಡಿ.ಕೋಟೆ |
| | | 27 | ಟಿ.ನರಸೀಪುರ | 10 | ನಂಜನಗೂಡು |
| | | 28 | ಪಿರಿಯಾಪಟ್ಟಣ | | |
| | | 29 | ಕೆ.ಆರ್.ನಗರ | | |
| 11 | ಚಿಕ್ಕಮಗಳೂರು | 30 | ಕಡೂರು | | |
| | | 31 | ತರೀಕೆರೆ | | |
| 12 | ಹಾಸನ | 32 | ಅರಕಲಗೂಡು | | |
| | | 33 | ಹೊಳೆನರಸೀಪುರ | | |
| | | 34 | ಬೇಲೂರು | | |
| | | 35 | ಚೆನ್ನರಾಯಪಟ್ಟಣ | | |
| | | 36 | ಅರಸೀಕೆರೆ | | |
| 13 | ಮಂಡ್ಯ | 37 | ಮಳವಳ್ಳಿ | | |
| | | 38 | ನಾಗಮಂಗಲ | | |
| | | 39 | ಕೆ.ಆರ್.ಪೇಟೆ | | |
| | | 40 | ಶ್ರೀರಂಗಪಟ್ಟಣ | | |
| | | 41 | ಮದ್ದೂರು | | |

| | | | | | |
|---|---|---|---|---|---|
| | | 42 | ಪಾಂಡವಪುರ | | |
| 14 | ಚಾಮರಾಜನಗರ | 43 | ಚಾಮರಾಜನಗರ | 11 | ಗುಂಡ್ಲುಪೇಟೆ |
| | | 44 | ಕೊಳ್ಳೆಗಾಲ | | |
| 15 | ಬೆಳಗಾಂ | 45 | ಅಥಣಿ | 12 | ಗೋಕಾಕ್ |
| | | 46 | ರಾಯಬಾಗ್ | 13 | ಸವದತ್ತಿ (ಸಂಪಗಾಂ) |
| | | 47 | ಬೈಲಹೊಂಗಲ (ಪರಸ್‌ಗಡ್) | 14 | ಹುಕ್ಕೇರಿ |
| | | 48 | ರಾಮದುರ್ಗ | | |
| 16 | ಬಿಜಾಪುರ | 49 | ಬಿಜಾಪುರ | 15 | ಮುದ್ದೇಬಿಹಾಳ್ |
| | | 50 | ಬಸವನಬಾಗೇವಾಡಿ | | |
| | | 51 | ಇಂಡಿ | | |
| | | 52 | ಸಿಂಧಗಿ | | |
| 17 | ಧಾರವಾಡ | 53 | ಕಲಘಟಗಿ | 16 | ಕುಂದಗೋಳ |
| | | 54 | ನವಲಗುಂದ | | |
| 18 | ಉತ್ತರಕನ್ನಡ | 55 | ಸೂಪ (ಜೋಯಿಡಾ) | 17 | ಭಟ್ಕಳ |
| | | 56 | ಅಂಕೋಲ | | |
| | | 57 | ಸಿದ್ಧಾಪುರ | | |
| 19 | ಬಾಗಲಕೋಟೆ | 58 | ಬಿಳಗಿ | 18 | ಬಾದಾಮಿ |
| | | 59 | ಹುನಗುಂದ | | |
| 20 | ಗದಗ | 60 | ಮುಂಡರಗಿ | 19 | ಶಿರಹಟ್ಟಿ |
| | | 61 | ರೋಣ | | |
| 21 | ಹಾವೇರಿ | 62 | ಸವಣೂರು | 20 | ಹಿರೇಕೆರೂರು |
| | | 63 | ಶಿಗ್ಗಾಂವ್ | 21 | ಬ್ಯಾಡಗಿ |
| | | 64 | ಹಾವೇರಿ | | |
| | | 65 | ಹಾನಗಲ್ | | |
| 22 | ಗುಲ್ಬರ್ಗಾ | 66 | ಗುಲ್ಬರ್ಗಾ | 22 | ಶಹಪುರ |
| | | 67 | ಸೇಡಂ | 23 | ಸುರಪುರ |
| | | 68 | ಯಾದಗೀರ | | |
| | | 69 | ಚಿತ್ತಾಪುರ | | |
| | | 70 | ಅಫಜಲಪುರ | | |
| | | 71 | ಅಳಂದ | | |
| | | 72 | ಚಿಂಚೋಳಿ | | |
| | | 73 | ಜೇವರ್ಗಿ | | |
| 23 | ಬಳ್ಳಾರಿ | 74 | ಕೂಡ್ಲಿಗಿ | 24 | ಸಂಡೂರು |
| | | 75 | ಹಗರಿಬೊಮ್ಮನಹಳ್ಳಿ | 25 | ಶಿರಗುಪ್ಪ |
| | | | | 26 | ಹಡಗಲಿ |
| 24 | ಬೀದರ್ | 76 | ಹುಮನಾಬಾದ್ | 27 | ಭಾಲ್ಕಿ |
| | | 77 | ಔರಾದ್ | | |
| | | 78 | ಬಸವಕಲ್ಯಾಣ | | |
| 25 | ರಾಯಚೂರು | 79 | ಸಿಂಧನೂರು | 28 | ರಾಯಚೂರು |
| | | 80 | ಲಿಂಗಸಗೂರು | 29 | ದೇವದುರ್ಗ |
| | | | | 30 | ಮಾನ್ವಿ |
| 26 | ಕೊಪ್ಪಳ | 81 | ಕೊಪ್ಪಳ | 31 | ಕುಷ್ಟಗಿ |
| | | 82 | ಯಲ್ಬುರ್ಗ | 32 | ಗಂಗಾವತಿ |

ಸಂ:ಸಕಇ 53 ಮುಂದೇಶಾ 2009

19/5/09

(ಪಿ.ಎಂ.ಚಿದಾನಂದಸ್ವಾಮಿ)

ಸರ್ಕಾರದ ಅಧೀನ ಕಾರ್ಯದರ್ಶಿ-1

ಸಮಾಜ ಕಲ್ಯಾಣ ಇಲಾಖೆ